VIJAYAKUMAR KANNUR
Digitally signed by VIJAYAKUMAR KANNUR
Date: 2025.08.12 10:45:07 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 11.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ಎ ಮತ್ತು ಬಿ ರವರ ಪರ ಶ್ರೀ ಬಿ ಹೆಚ್ ಆರ್ ವಕೀಲರಿಂದ :**

ನಾನು ಮುಧೋಳ ಪಟ್ಟಣದ ಜನತಾ ಕಾಲೋನಿಯಲ್ಲಿ ವಾಸಿಸುತ್ತಿರುವೆನು. ನಾನು ಬಳೆ ವ್ಯಾಪಾರ ಮಾಡುತ್ತಿರುವೆನು. ನನಗೆ ಈಗ 59 ವರ್ಷಗಳು ಆಗಿರುವವು. ವಾದಿಯ ಮನೆ ಮುಧೋಳ ಪಟ್ಟಣದ ಕುಂದರಗಿಯ ಮಠದ ಹತ್ತಿರ ಇರುವುದು. ವಾದಿಯ ಪರಿಚಯ ನನಗೆ ಸುಮಾರು 40 ವರ್ಷಗಳಿಂದ ಇರುವುದು. ವಾದಿ ನನಗೆ ಯಾವುದೇ ರೀತಿಯ ಸಂಬಂಧಿ ಆಗಿರುವುದಿಲ್ಲ, ಆದರೆ ಅವಳು ನನ್ನ ಸ್ನೇಹಿತನ ಹೆಂಡತಿ ಆಗಿರುವಳು.

2. ವಾದಿಗೆ ಸಂಬಂದಪಟ್ಟಂತೆ ದಾವಾ ಆಸ್ತಿ ಮತ್ತು ಸರ್ವೇ ನಂಬರ್ 180/ಅ ವಿಸ್ತೀರ್ಣ 8 ಗುಂಟೆಯ ಆಸ್ತಿ ಇರುವುದು. ವಾದಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಅವಳಿಗೆ ಆರೋಗ್ಯದ ಸಮಸ್ಯೆ ಇರುವುದು ಎಂದು ಸಾಕ್ಷಿ ಉತ್ತರಿಸುವರು. ವಾದಿ ನನಗೆ ಒಟ್ಟು ಮುಕ್ತ್ಯಾರ ನಾಮ ಪತ್ರವನ್ನು ಮುಧೋಳದಲ್ಲಿ ಬರೆದುಕೊಟ್ಟಿರುವಳು. ವಾದಿ ಮತ್ತು ನಾನು ಕುಲಬಾಂದವರು ಆಗಿರುವುದಿಲ್ಲ. ವಾದಿಯ ಆರೋಗ್ಯಕ್ಕೆ ಸಂಬಂದಪಟ್ಟಂತೆ ವೈದ್ಯಕೀಯ ದಾಖಲೆಗಳನ್ನು ನಾನು ಹಾಜರು ಪಡಿಸಿರುವುದಿಲ್ಲ. ವಾದಿಯ ಸಂಬಂಧಿಕರು ಬಹಳಷ್ಟು ಜನ ಇರುವರು ಎಂದರೆ ಸರಿ.

3. ದಾವಾ ಆಸ್ತಿಯ ನಂಬರ್ 199/ಬಿ. ಈ ಆಸ್ತಿಯನ್ನು ನಾನು ನೋಡಿರುವೆನು. ಈ ಆಸ್ತಿಯ ಚೆಕ್ಕು ಬಂದಿ ಹೇಳಲು ಬರುವುದು. ಪೂರ್ವಕ್ಕೆ ಅಂಗಡಿ , ಹಿಟ್ಟಿನ ಗಿರಣಿ ಮತ್ತು ಮನೆಗಳು

ಇರುವವು. ಪಶ್ಚಿಮಕ್ಕೆ ಈ ಆಸ್ತಿಯ ಬೇರೆ ಭಾಗ ಇರುವುದು, ದಕ್ಷಿಣಕ್ಕೆ ಸರ್ವೇ ನಂಬರ್ 199/ಎ ಆಸ್ತಿ ಇರುವುದು, ಉತ್ತರಕ್ಕೆ ಹಳ್ಳ ಇರುವುದು. ದಾವಾ ಆಸ್ತಿಯು ವಾದಿಗೆ ಸಂಬಂಧಪಟ್ಟಿರುವುದು ಎಂಬುದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನಾನು ನೋಡಿರುವೆನು. ದಾವಾ ಆಸ್ತಿಯ ಹುತಾರ್ ದಲ್ಲಿ ಯಾರ ಹೆಸರು ಇರುವುದು ಎಂದು ಈಗ ನನಗೆ ಅಷ್ಟೊಂದು ನೆನಪು ಇರುವುದಿಲ್ಲ. ದಾವಾ ಆಸ್ತಿಯ ಹುತಾರ್ ದಲ್ಲಿ ವಾದಿಯ ಹೆಸರು ಇರುವುದಿಲ್ಲ, ಕೋರ್ಟ‌ನ ಡಿಕ್ರಿಯಲ್ಲಿ ಅವಳ ಹೆಸರು ಇರುವುದು. ವಾದಿಯ ಹೆಸರು ದಾವಾ ಆಸ್ತಿಗೆ ಡಿಕ್ರಿಯ ನಾತೆಯಿಂದ ಬಂದಿರುವುದು. ದಾವಾ ಆಸ್ತಿಯು ವಾದಿಯ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜೆಯನ್ನು ವಾದಿ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮತ್ತು ಪ್ರತಿವಾದಿಯರ ಆಸ್ತಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

4. ವಾದ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮೃತ ಸೋನುಬಾಯಿ ರುಕ್ಮಾಜಿ ಶೇರಖಾನೆ ಇವಳು ವಾದಿಯ ಗಂಡನ ಹೆಸರಿನಲ್ಲಿ power of attorney ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸೋನುಬಾಯಿ ದರ್ಮಾಜಿಯ ಹೆಸರಿನಲ್ಲಿ ಯಾವುದೇ power of attorney ಬರೆದುಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಅಸಲು ದಾವಾ ನಂ. 27/1998 ರ ದಾವೆಯು ಯಾರು ಯಾರ ವಿರುದ್ದ ದಾಖಲು ಮಾಡಿರುವರು ಎಂದು ನನಗೆ ಮಾಹಿತಿ ಇರುವುದಿಲ್ಲ. ಆ ದಾವೆಯಲ್ಲಿ ನ್ಯಾಯಾಲಯದವರು ಯಾವ ತೀರ್ಪು ನೀಡಿರುವರು ಎಂದು ಸಹ ನನಗೆ ಮಾಹಿತಿ ಇರುವುದಿಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ , ಆದರೂ ಸಹ ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಆಸ್ತಿ ಸೋನುಬಾಯಿಗೆ ರುಕ್ಮಾಜಿ ತಿಪ್ಪಣ್ಣ ಶೇರಖಾನೆ ಇವರ ಕಡೆಯಿಂದ ಬಂದಿರುವುದು. ಸೋನುಬಾಯಿ ಮತ್ತು ರುಕ್ಮಾಜಿ ಇವರ ವೈವಾಹಿಕ ಜೀವನದಿಂದ ಮಕ್ಕಳು ಜನ್ಮ ತಾಳಿರುವುದಿಲ್ಲ. ಎಂ.ಇ ನಂ. 11352 ದಿಃ 15.11.1995 ರ ಆದೇಶದ ಪ್ರಕಾರ

ವಾರಸಾನಾಯಿಂದ ಸೋನುಬಾಯಿ ಮತ್ತು ದತ್ತಕ ಮಗನ ಹೆಸರಿನಲ್ಲಿ ಹಕ್ಕು ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂ. 27/1998 ರ ಡಿಕ್ರಿಯನ್ನು ನೋಡಿರುವೆನು. ಆ ದಾವೆಯಲ್ಲಿ ಸೋನುಬಾಯಿಯ ಪರವಾಗಿ ಯಾವ ವ್ಯಕ್ತಿಯು ಹಾಜರಾಗಿದ್ದರು ಎಂದು ನನಗೆ ಮಾಹಿತಿ ಇರುವುದಿಲ್ಲ. ಅಸಲು ದಾವಾ ನಂ. 27/1998 ರ ದಾವೆಯಲ್ಲಿ ವಾದಿಗೆ ಯಾರು ಆಸ್ತಿ ಬರೆದುಕೊಟ್ಟಿರುವರು ಎಂದರೆ ಮೃತ ಸೋನುಬಾಯಿ ಗಂಡ ರುಕ್ಮಾಜಿ ಬರೆದುಕೊಟ್ಟಿರುವರು. ಆ ಡಿಕ್ರಿಯ ಪ್ರಕಾರ ವಾದಿಯ ಹೆಸರು ದಾವಾ ಆಸ್ತಿಗೆ ಹಕ್ಕು ಬದಲಾವಣೆ ಆಗಿರುವುದಿಲ್ಲ. ಯಾವ ಕಾರಣಕ್ಕೆ ದಾವಾ ಆಸ್ತಿಗೆ ಅಸಲು ದಾವಾ ನಂ. 27/1998 ರ ಡಿಕ್ರಿಯ ಪ್ರಕಾರ ಹೆಸರು ದಾಖಲಾತಿಗಿರುವುದಿಲ್ಲ ಎಂದು ನನಗೆ ಮಾಹಿತಿ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಇದೆ.

VIJAYAKUMAR KANNUR

Digitally signed by VIJAYAKUMAR KANNUR
Date: 2025.08.12 10:45:14 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ